# Notice to UP varsity over ragging case

## MCI takes University to task after ragging video surfaces online

NEW DELHI, PTI

Taking note of alleged mass ragging at a university in Etawah Medical varsity, the Medical Council of India has asked the varsity why it should not be fined and declared ineligible for new admissions for a minimum period of one year.

The Board of Governors in Supersession of Medical Council of India (MCI BoG) also asked why the senior batches admitted to MBBS course in the varsity should not be suspended from attending classes for a minimum period of one month.

Several first-year students of Saifai Medical University were made to parade on the campus with their heads tonsured.

"Why exemplary fine of Rs 1 Lakh for each incident of ragging, that of 150X1 Lakh, that is equal to Rs 150 Lakhs be not imposed upon the institute," it asked.

The MCI asked the university to reply within 24 hours, failing which it shall be presumed that it has nothing to say in the matter and punishment, as indicated above, shall be imposed upon the institution, the notice said.

A purported video clip on social media showed the students in white coats walking in a single file, bowing their tonsured heads and also making 'salaam' gestures. Another clip showed them in rows.

Even while promising "strict action" on a news channel, University Vice-Chancellor Raj Kumar had on Wednesday appeared to condone "mild" cases of this kind.

He said ragging at one time used to be a way of inculcating "sanskar" (tradition or manners) of the world of medicine among students.

According to the notice, the Council Office has taken note of the reports that have appeared in print and electronic media regarding the ragging of the first-year medical students in the college and stated that it brings out the "complete failure of the College authorities in addressing the menace of ragging".

# ರ್‍ಯಾಗಿಂಗ್ ಪಿಡುಗು ತಡೆಯಲು ಮತ್ತಷ್ಟು ಕಠಿಣ ಕ್ರಮ ಅಗತ್ಯ

ಉತ್ತರಪ್ರದೇಶದ ಇಟಾವಾ ಜಿಲ್ಲೆಯ ಸೈಫಾಯ್‌ನಲ್ಲಿರುವ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಮೊದಲ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳನ್ನು ಸಾಮೂಹಿಕವಾಗಿ ರ್‍ಯಾಗಿಂಗ್‌ಗೆ ಒಳಪಡಿಸಿರುವುದು ತೀವ್ರ ಖಂಡನೀಯ. ಸುಮಾರು 150 ವಿದ್ಯಾರ್ಥಿಗಳ ತಲೆ ಬೋಳಿಸಿ ವಿಶ್ವವಿದ್ಯಾಲಯದ ಆವರಣದಲ್ಲಿ ಮೆರವಣಿಗೆ ಮಾಡಿಸಿರುವುದು ಹಾಗೂ ಆ ವಿದ್ಯಾರ್ಥಿಗಳು ಹಿರಿಯ ವಿದ್ಯಾರ್ಥಿಗಳಿಗೆ ತಲೆ ತಗ್ಗಿಸಿ ಸಲಾಂ ಹೊಡೆದು ಓಡಾಡುವಂತೆ ಮಾಡಿರುವುದರ ವಿಡಿಯೊ ಬಹಿರಂಗಗೊಂಡಿದೆ. ಭದ್ರತಾ ಸಿಬ್ಬಂದಿ ಇದನ್ನು ಮೌನವಾಗಿ ನೋಡುತ್ತಿರುವ ದೃಶ್ಯವೂ ಒಂದು ವಿಡಿಯೊದಲ್ಲಿದೆ. ಈ ವಿಶ್ವವಿದ್ಯಾಲಯದಲ್ಲಿ ರ್‍ಯಾಗಿಂಗ್ ಯಾವುದೇ ಭಿಡೆಯಿಲ್ಲದೆ ನಡೆಯುತ್ತಿದೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಬೋಳು ತಲೆಯಲ್ಲಿ ವಿದ್ಯಾರ್ಥಿಗಳು ಮರುದಿನ ತರಗತಿಗೆ ಹಾಜರಾಗಿದ್ದರಿಂದ ರ್‍ಯಾಗಿಂಗ್ ವಿಷಯ ಬಹಿರಂಗಗೊಂಡಿದೆಯೇ ಹೊರತು, ಯಾವ ವಿದ್ಯಾರ್ಥಿಯೂ ದೂರು ನೀಡಿಲ್ಲ ಎನ್ನುವುದು ಇಲ್ಲಿ ಗಮನಾರ್ಹ. ರ್‍ಯಾಗಿಂಗ್ ಹೆಸರಿನಲ್ಲಿ ಉತ್ತರಪ್ರದೇಶದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಕಿರುಕುಳ ನೀಡುವ ವರದಿಗಳು ಪ್ರತಿವರ್ಷವೂ ಕಾಣಿಸಿಕೊಳ್ಳುತ್ತಿವೆ. ಕಳೆದ ವರ್ಷ ಆಗಸ್ಟ್‌ನಲ್ಲಿ ಅಲಹಾಬಾದ್‌ನ ಮೋತಿಲಾಲ್ ನೆಹರೂ ಸರ್ಕಾರಿ ವೈದ್ಯಕೀಯ ಕಾಲೇಜ್‌ನಲ್ಲಿ 100 ಮಂದಿ ಮೊದಲ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳ ತಲೆ ಬೋಳಿಸಿ ಹೀಗೆಯೇ ನಡುಬಗ್ಗಿಸಿ ಮುಜುರಾ ಮಾಡುವ ವಿಡಿಯೊ ಬಹಿರಂಗವಾಗಿತ್ತು. ರ್‍ಯಾಗಿಂಗ್ ಅನ್ನು ಪ್ರತಿಭಟಿಸಿದ ವಿದ್ಯಾರ್ಥಿಗಳನ್ನು ಥಳಿಸಲಾಗಿತ್ತು. ನವೆಂಬರ್‌ನಲ್ಲಿ ಸಹಾರನ್‌ಪುರದ ಜಿಲ್ಲಾ ಮೆಡಿಕಲ್ ಕಾಲೇಜಿನಲ್ಲಿ ರ್‍ಯಾಗಿಂಗ್ ಹಾಗೂ ಹಲ್ಲೆ ಪ್ರಕರಣ ವರದಿಯಾಗಿತ್ತು. ರ್‍ಯಾಗಿಂಗ್ ನಡೆಸಿದ 52 ಹಿರಿಯ ವಿದ್ಯಾರ್ಥಿಗಳನ್ನು ತರಗತಿಯಿಂದ ಒಂದು ತಿಂಗಳು ಮತ್ತು ಹಾಸ್ಟೆಲ್‌ನಿಂದ ಆರು ತಿಂಗಳ ಕಾಲ ಸಸ್ಪೆಂಡ್ ಮಾಡಲಾಗಿತ್ತು. ಉತ್ತರಪ್ರದೇಶದಲ್ಲಿ ಕಾನೂನು ಸುವ್ಯವಸ್ಥೆ ಪರಿಸ್ಥಿತಿ ಇತ್ತೀಚೆಗೆ ತೀರಾ ಹದಗೆಟ್ಟಿದ್ದು, ಗುಂಪುಗೂಡಿ ಹಲ್ಲೆ ನಡೆಸುವ ಪ್ರಕರಣಗಳೂ ಪದೇ ಪದೇ ನಡೆಯುತ್ತಿವೆ. ಇದರ ನಡುವೆ ವೈದ್ಯಕೀಯ ಕಾಲೇಜ್ ಕ್ಯಾಂಪಸ್‌ಗಳಲ್ಲಿ ನಡೆಯುತ್ತಿರುವ ರ್‍ಯಾಗಿಂಗ್ ಪ್ರಕರಣಗಳನ್ನು ಅಲ್ಲಿ ಯಾರೂ ಗಂಭೀರವಾಗಿ ಪರಿಗಣಿಸಿದಂತೆ ಕಾಣಿಸುತ್ತಿಲ್ಲ. ಕಿರಿಯ ವಿದ್ಯಾರ್ಥಿಗಳು ತಮ್ಮ ಸುರಕ್ಷೆಯ ದೃಷ್ಟಿಯಿಂದ ದೂರು ನೀಡುತ್ತಿಲ್ಲ ಎನ್ನುವುದು ಮೇಲ್ನೋಟಕ್ಕೇ ಎದ್ದು ಕಾಣುತ್ತದೆ. ಸೈಫಾಯ್‌ನ ವೈದ್ಯಕೀಯ ವಿಶ್ವವಿದ್ಯಾಲಯದ ಕುಲಪತಿ, ಈ ಘಟನೆಯ ತನಿಖೆಗೆ ಸಮಿತಿಯೊಂದನ್ನು ರಚಿಸಿದ್ದು, ಆರೋಪ ಸಾಬೀತಾದರೆ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ರ್‍ಯಾಗಿಂಗ್ ಪ್ರಕರಣಗಳಲ್ಲಿ ಕಿರುಕುಳಕ್ಕೆ ಒಳಗಾದ ಕಿರಿಯ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಭವಿಷ್ಯದ ದೃಷ್ಟಿಯಿಂದ ದೂರು ನೀಡಲು ಹೋಗುವುದಿಲ್ಲ. ಹಾಗಾಗಿ ಇಂತಹ ಪ್ರಕರಣಗಳಲ್ಲಿ ಆರೋಪ ಸಾಬೀತಾಗುವುದೇ ಇಲ್ಲ.



> ರ್‍ಯಾಗಿಂಗ್ ಹಾವಳಿ ತಡೆಗೆ ಕಾಲೇಜುಗಳು ಮತ್ತಷ್ಟು ಬಿಗಿ ಕ್ರಮಗಳನ್ನು ಅಳವಡಿಸಿಕೊಳ್ಳುವ ಕುರಿತು ಗಂಭೀರವಾಗಿ ಯೋಚಿಸಬೇಕು. ಶಿಕ್ಷೆಯ ಭಯ ಹೆಚ್ಚಿಸುವುದೂ ಅಗತ್ಯ

ಹಾಗೆ ನೋಡಿದರೆ, ಇದು ಉತ್ತರಪ್ರದೇಶವೊಂದಕ್ಕೇ ಸೀಮಿತವಾದ ಸಮಸ್ಯೆಯಲ್ಲ. ಕರ್ನಾಟಕ ಸಹಿತ ಬಹುತೇಕ ಎಲ್ಲ ರಾಜ್ಯಗಳಲ್ಲೂ ಒಂದಲ್ಲ ಒಂದು ವೈದ್ಯಕೀಯ ಕಾಲೇಜಿನಲ್ಲಿ ರ್‍ಯಾಗಿಂಗ್ ಪಿಡುಗು ಪ್ರತಿವರ್ಷವೂ ಸುದ್ದಿ ಮಾಡುತ್ತದೆ. ಕಳೆದ ವರ್ಷ ದೇಶದಾದ್ಯಂತ 170 ವೈದ್ಯಕೀಯ ಕಾಲೇಜುಗಳಲ್ಲಿ ರ್‍ಯಾಗಿಂಗ್ ಹೆಸರಿನಲ್ಲಿ ಕಿರಿಯ ವಿದ್ಯಾರ್ಥಿಗಳಿಗೆ ಕಿರುಕುಳ ನೀಡಿರುವ ಬಗ್ಗೆ ದೂರುಗಳು ದಾಖಲಾಗಿವೆ. ಇದರಲ್ಲೂ ಅತ್ಯಧಿಕ ಸಂಖ್ಯೆಯ ದೂರುಗಳು ಉತ್ತರಪ್ರದೇಶದಿಂದಲೇ ಬಂದಿವೆ. ರ್‍ಯಾಗಿಂಗ್ ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ, ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಅವಕಾಶ ಇದೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಮತ್ತು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಕೂಡಾ ರ್‍ಯಾಗಿಂಗ್ ತಡೆಗೆ ನಿಯಮಾವಳಿಗಳನ್ನು ರೂಪಿಸಿವೆ. ಯುಜಿಸಿ ನಿಯಮಗಳ ಪ್ರಕಾರ, ಪ್ರತಿ ಕಾಲೇಜಿನಲ್ಲೂ ರ್‍ಯಾಗಿಂಗ್ ತಡೆ ಸಮಿತಿಯನ್ನು ರಚಿಸಬೇಕು. ಸಾಮೂಹಿಕವಾಗಿ 150 ವಿದ್ಯಾರ್ಥಿಗಳ ತಲೆ ಬೋಳಿಸಿರುವುದನ್ನು ನೋಡಿದರೆ, ಸೈಫಾಯ್‌ನ ವೈದ್ಯಕೀಯ ಕಾಲೇಜಿನಲ್ಲಿ ಇಂತಹ ಸಮಿತಿಯೂ ಇದ್ದಂತೆ ಕಾಣಿಸುತ್ತಿಲ್ಲ. ವೈದ್ಯಕೀಯ ಕಾಲೇಜ್‌ಗಳಲ್ಲಿ ಕಿರಿಯ ವಿದ್ಯಾರ್ಥಿಗಳನ್ನು ಬೆದರಿಸಿ ಹಿರಿಯ ವಿದ್ಯಾರ್ಥಿಗಳು ತಮ್ಮ ಅಸೈನ್‌ಮೆಂಟ್ ಬರೆಸುವುದು, ಹೊರಗಿನಿಂದ ಆಹಾರ ಪದಾರ್ಥಗಳನ್ನು ತರಿಸುವುದು, ಜೇಬಿನಿಂದ ಹಣ ಎಗರಿಸುವುದು... ಹೀಗೆ ನಾನಾ ಬಗೆಯ ಕಿರುಕುಳ ನೀಡುವುದೂ ಇದೆ. ಕಿರುಕುಳಕ್ಕೆ ಒಳಗಾದ ವಿದ್ಯಾರ್ಥಿಗಳು ಭಯದಿಂದ ದೂರು ನೀಡದೇ ಇರುವಂತಹ ವಾತಾವರಣ ಇರುವ ಹಿನ್ನೆಲೆಯಲ್ಲಿ, ಎಲ್ಲ ವೈದ್ಯಕೀಯ ಕಾಲೇಜುಗಳಲ್ಲಿ ದೂರು ಪೆಟ್ಟಿಗೆಗಳನ್ನು ಇಟ್ಟು, ಯಾರೇ ಆದರೂ ತಮ್ಮ ಹೆಸರು ನಮೂದಿಸದೆ ದೂರು ನೀಡಲು ಅನುಕೂಲ ಮಾಡಿಕೊಡುವುದು ಒಳ್ಳೆಯದು. ಕಾಲೇಜುಗಳಲ್ಲಿ ಈ ಕುರಿತು ಆಪ್ತಸಮಾಲೋಚಕರ ನೇಮಕದ ಅಗತ್ಯವೂ ಇದೆ. ಜೊತೆಗೆ ರ್‍ಯಾಗಿಂಗ್ ಹಾವಳಿ ತಡೆಗೆ ಕಾಲೇಜುಗಳ ಆಡಳಿತ ಮಂಡಳಿಗಳು ಮತ್ತಷ್ಟು ಬಿಗಿ ಕ್ರಮಗಳನ್ನು ಅಳವಡಿಸಿಕೊಳ್ಳುವ ಕುರಿತು ಗಂಭೀರವಾಗಿ ಯೋಚಿಸಬೇಕು. ಶಿಕ್ಷೆಯ ಭಯ ಹೆಚ್ಚಿಸುವುದು ಕೂಡ ಅಗತ್ಯ.